ಅಸಲು ದಾವಾ ನಂ. 112/2023
ಪಿ ಡಬ್ಲ್ಯು-1

ದಿನಾಂಕಃ 22-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ- ಪ್ರತಿವಾದಿ ನಂ.**1** ರಿಂದ **3** ಪರ ಶ್ರೀ. ಎಮ್ ಎಸ್ ಎಮ್ ವಕೀಲರಿಂದ.

ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಯರು ಅಸಲು ದಾವಾ ನಂ.288/2016 ನೇದ್ದನ್ನು ದಾಖಲು ಮಾಡಿದ ವಿಷಯ ಗೊತ್ತಿರುತ್ತದೆ. ಸದರಿ ದಾವೆಯಲ್ಲಿ 1 ನೇ ಪ್ರತಿವಾದಿಯು ಏನು ತಕರಾರನ್ನು ಸಲ್ಲಿಸಿದ್ದರು ಎಂದು ಗೊತ್ತಿಲ್ಲ. ಮೃತ ದುರ್ಗವ್ವ ಇವರು ಸದರಿ ದಾವೆಯಲ್ಲಿ 1 ನೇ ಪ್ರತಿವಾದಿ ಮಾತ್ರ ತನ್ನ ಮಗಳು ಎಂದು ಹೇಳಿ ಪ್ರಮಾಣ ಪತ್ರ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಹಾಗೇ ದಾವೆ ಸಲ್ಲಿಸಿದ ವಿಷಯದ ದಿನಾಂಕ ಯಾವಾಗ ಗೊತ್ತಾಯಿತು ಎಂದು ನನಗೆ ಗೊತ್ತಿಲ್ಲ. ನಿಪಿ-13 ದಾಖಲೆಯನ್ನು ಈ ದಾವೆಯಲ್ಲಿ ನಾನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಪಿ-13 ಫೋಟೋವನ್ನು ವಾದ ಪತ್ರದ ಜೊತೆಗೆ ಹಾಜರುಪಡಿಸಿರಲಿಲ್ಲ ಎಂದರೆ ಸರಿ. ಅದನ್ನು ಆವಾಗ ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ-13 ನ್ನು ಯಾವ ದಿನಾಂಕದಂದು ತೆಗೆದಿರುತ್ತಾರೆ ಮತ್ತು ಯಾವ ಸ್ಟುಡಿಯೋದವರು ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ನಿಪಿ-13 ರ ಸಿಡಿ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ-13 ನ್ನು ನಾನೇ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯವರು ಆಸ್ತಿಗಳನ್ನು ಒಟ್ಟುಗೂಡಿಸಿ ಯಾರು ಯಾರಿಗೆ ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಪ್ರತಿವಾದಿ ನಂ.2 ಮತ್ತು 3 ಇವರಿಗೆ ಕೊಳಗೇರಿ ಅಭಿವೃದ್ಧಿ ಮಂಡಳಿಯವರು ಆಸ್ತಿ ನಂ.123, 124 ನೀಡಿರುತ್ತಾರೆ ಎಂದರೆ ಸರಿಯಲ್ಲ. ಆಸ್ತಿಗಳನ್ನು ನನಗೂ ಸಹ ಮಂಜೂರು ಮಾಡಬೇಕು ಎಂದು ನಾನು ಅರ್ಜಿ ಸಲ್ಲಿಸಿರುತ್ತೇನೆ. ಸಾಕ್ಷಿ ತಕರಾರು ಅರ್ಜಿ ಸಲ್ಲಿಸಿರುವುದಾಗಿ ಮುಂದುವರೆದು ನುಡಿಯುತ್ತಾರೆ.ಆ ತಕರಾರು ಅರ್ಜಿಗಳನ್ನು ಈಗ ಹಾಜರುಪಡಿಸಿಲ್ಲ. ಮುಂದೆ ಹಾಜರುಪಡಿಸುತ್ತೇನೆ. ಹಾಗೇ ತಕರಾರು ಅರ್ಜಿಗಳನ್ನು ಸಲ್ಲಿಸಿ ಈಗ 2 ವರ್ಷ ಆಯಿತು. ದಾವಾದ ಆಸ್ತಿಗಳು ಸರ್ಕಾರಿ ಆಸ್ತಿ ಆಗಿರುವುದರಿಂದ ನನಗೆ ಮತ್ತು 1 ನೇ ಪ್ರತಿವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಭೀಮಣ್ಣ ಮತ್ತು ದುರ್ಗವ್ವ ಇವರಿಗೆ ಪ್ರತಿವಾದಿ ನಂ.1 ಮಾತ್ರ ಮಗಳು ಎಂದರೆ ಸರಿಯಲ್ಲ. ದಾವೆ

ಅಸಲು ದಾವಾ ನಂ. 112/2023
ಪಿ ಡಬ್ಲ್ಯು-1

ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಸರ್ಕಾರವನ್ನು ಅವಶ್ಯಕ ಪಕ್ಷಗಾರರನ್ನಾಗಿ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).